# ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲೂಕು ಮತ್ತು ಜಿಲ್ಲೆ

## ಸೇತುಬಂಧ ಸಾಧನಾ ಪರೀಕ್ಷೆ – 10 ನೆಯ ತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೋತ್ತರ ಪತ್ರಿಕೆ

| ವಿದ್ಯಾರ್ಥಿಯ ಹೆಸರು: | ದಾಖಲಾತಿ ಸಂಖ್ಯೆ: |
|---|---|

**ಸಾಮರ್ಥ್ಯ – 1. ಶಿಕ್ಷಕರು ಹೇಳಿದ ವಾಕ್ಯಗಳ ಉಕ್ತಲೇಖನ ಬರೆಯುವುದು.**

**ಸಾಮರ್ಥ್ಯ – 2. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ರಾಧಾಕೃಷ್ಣನ್ ಅವರು ಹಿಂದೂ ಧರ್ಮದ ತತ್ತ್ವಶಾಸ್ತ್ರ ಮತ್ತು ಸಾಹಿತ್ಯವನ್ನೆಲ್ಲ ಅಧ್ಯಯನ ಮಾಡಿದರು. ಯುರೋಪಿಯನ್ ತತ್ತ್ವಶಾಸ್ತ್ರ ಮತ್ತು ಸಾಹಿತ್ಯದ ಅಭಿವ್ಯಕ್ತ ವಿಚಾರಗಳಿಂದ ಅವರ ವಿಶ್ವದೃಷ್ಟಿ ಮತ್ತು ತಾತ್ವಿಕ ದೃಷ್ಟಿಕೋನ ಪ್ರಭಾವಿತವಾಯಿತು. ಸ್ವಾಮಿ ವಿವೇಕಾನಂದರ ವಿಚಾರಧಾರೆ ಅವರ ಮನವನ್ನು ಆಕರ್ಷಿಸಿತು. ಅವರು "ಹಿಂದೂ ಧರ್ಮವು ಒಂದು ವೈಚಾರಿಕ ಜೀವನ ಮಾರ್ಗವೆಂದೂ, ನೈತಿಕ ಗುಣಾತ್ಮಕ ವಿಷಯಗಳಿಂದ ಕೂಡಿದ್ದು, ಮಾನವನ ಆಂತರಿಕ ಜೀವನದ ಬಗ್ಗೆ ಪ್ರಾಮುಖ್ಯತೆವುಳ್ಳದ್ದಾಗಿದೆ. ಹಿಂದೂ ಧರ್ಮವಾಗಲಿ, ವೇಂದಾತವಾಗಲಿ ಅಸತ್ಯವನ್ನು ಹೇಳುವುದಿಲ್ಲ. ಭಾರತೀಯ ಚಿಂತನೆಗಳು ಯಾವುದೋ ವಿಚಿತ್ರ ಮತ್ತು ನಿಗೂಢ ಪರಿಕಲ್ಪನೆಗಳಾಗಿಲ್ಲ. ಜೀವನದ ನಾಡಿ ಮಿಡಿತಗಳನ್ನು ಸೂಕ್ಷ್ಮ ಮನಸ್ಸಿನ ಚಿಂತನೆಗಳನ್ನು ತಿಳಿಯಪಡಿಸುವುದಾಗಿದೆ" ಎಂದು ಸರಳವಾಗಿ ಹೇಳಿದರು ಶಿಕ್ಷಣದ ಮಹತ್ತ್ವವನ್ನು ಮನಗಂಡ ಇವರು "ಶಿಕ್ಷಣ ಜೀವನದ ಅವಿಭಾಜ್ಯ ಅಂಗ. ಅದು ಮಾನವನನ್ನು ಪರಿಪೂರ್ಣತೆ ಹಾಗೂ ಸುಸಂಸ್ಕೃತಿಯತ್ತ ಒಯ್ಯುವ ಸಾಧನ ಮಾರ್ಗ" ಎಂದಿದ್ದಾರೆ. ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣದಲ್ಲಿ "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ" ಎಂದು ತಮ್ಮ ನಿಲುವನ್ನು ಅಭಿವ್ಯಕ್ತಿಸಿದರು.

**ಪ್ರಶ್ನೆಗಳು:**

1. ರಾಧಾಕೃಷ್ಣನ್ ಅವರು ಏನನ್ನೆಲ್ಲ ಅಧ್ಯಯನ ಮಾಡಿದರು?

2. ಯಾವ ವಿಚಾರಗಳಿಂದ ರಾಧಾಕೃಷ್ಣನ್ ಅವರ ವಿಶ್ವದೃಷ್ಟಿ ಮತ್ತು ತಾತ್ವಿಕ ದೃಷ್ಟಿಕೋನ ಪ್ರಭಾವಿತವಾಯಿತು?

3. ಶಿಕ್ಷಣದ ಮಹತ್ತ್ವದ ಬಗ್ಗೆ ರಾಧಾಕೃಷ್ಣನ್ ಅವರ ಅಭಿಪ್ರಾಯವೇನು?

4. ರಾಧಾಕೃಷ್ಣನ್ ಅವರು ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣದಲ್ಲಿ ಏನೆಂದು ತಮ್ಮ ನಿಲುವನ್ನು ಅಭಿವ್ಯಕ್ತಿಸಿದರು?

**ಸಾಮರ್ಥ್ಯ – 3. ಕೆಳಗಿನ ಪದ್ಯಭಾಗಕ್ಕೆ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಪ್ರಜೆಯೆಲ್ಲಂ ಜಲಗಂಧ
ಸ್ರಜ ತಂಡುಲ ಧೂಪ ದೀಪ ಚರು ತಾಂಬೂಲ
ವ್ರಜದಿಂ ಪೂಜಿಸುವುದು ಜೀ
ವಜಾತದಿಂದೆನಗೆ ಬಲಿಯನಿತ್ತೊಡೆ ಮುನಿವೆಂ

| |
|---|
| |
| |
| |
| |
| |
| |
| |
| |

**ಸಾಮರ್ಥ್ಯ – 4.**

**ಕೊಟ್ಟಿರುವ ಪ್ರತಿ ಪ್ರಶ್ನೆಗೆ ಅಥವಾ ಅಪೂರ್ಣ ಹೇಳಿಕೆಗೂ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1. 'ಮಹಾಭಾರತ' ಪದದಲ್ಲಿರುವ ಮಹಾಪ್ರಾಣಾಕ್ಷರವಿದು:
   (ಎ) ಮ (ಬಿ) ಹಾ (ಸಿ) ಭಾ (ಡಿ) ರ

| **ಉತ್ತರ** | |
|---|---|

2. ಸಕರ್ಮಕ ಧಾತುವಿಗೆ ಉದಾಹರಣೆಯಿದು:
   (ಎ) ಓದು (ಬಿ) ಮಲಗು (ಸಿ) ಬದುಕು (ಡಿ) ಹೊಳೆ

| **ಉತ್ತರ** | |
|---|---|

3. 'ಜಯವಾಗಲಿ' ಪದವು ಈ ಕ್ರಿಯಾರೂಪಕ್ಕೆ ಉದಾಹರಣೆ:
   (ಎ) ನಿಷೇಧಾರ್ಥಕ (ಬಿ) ಪ್ರಶ್ನಾರ್ಥಕ (ಸಿ) ಸಂಭಾವನಾರ್ಥಕ (ಡಿ) ವಿಧ್ಯರ್ಥಕ

| **ಉತ್ತರ** | |
|---|---|

4. 'ಅರಸನಂ' ಪದದಲ್ಲಿರುವ ವಿಭಕ್ತಿಯ ಹೆಸರು:
   (ಎ) ಪ್ರಥಮ (ಬಿ) ದ್ವಿತೀಯ (ಸಿ) ತೃತೀಯ (ಡಿ) ಚತುರ್ಥಿ

| **ಉತ್ತರ** | |
|---|---|

5. 'ಗುರೂಪದೇಶ' ಪದದಲ್ಲಿ ಏರ್ಪಟ್ಟಿರುವ ಸಂಧಿ:
   (ಎ) ಸವರ್ಣದೀರ್ಘ (ಬಿ) ಗುಣ (ಸಿ) ವೃದ್ಧಿ (ಡಿ) ಯಣ್

| **ಉತ್ತರ** | |
|---|---|

6. 'ಮುಂದಲೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ:
   (ಎ) ತತ್ಪುರುಷ (ಬಿ) ಕರ್ಮಧಾರಯ (ಸಿ) ಅಂಶಿ (ಡಿ) ಗಮಕ

| **ಉತ್ತರ** | |
|---|---|

7. 'ಶಾಲೆಗೆ ಈ ವಿದ್ಯಾರ್ಥಿಯೊಂದು ರತ್ನ" ಈ ವಾಕ್ಯದಲ್ಲಿರುವ ಅಲಂಕಾರ;
   (ಎ) ಉಪಮಾ (ಬಿ) ರೂಪಕ (ಸಿ) ದೃಷ್ಟಾಂತ (ಡಿ) ಉತ್ಪ್ರೇಕ್ಷೆ

| **ಉತ್ತರ** | |
|---|---|

8. ಕಂದ ಪದ್ಯದಲ್ಲಿ ಇರುವ ಪಾದಗಳ ಸಂಖ್ಯೆ;
   (ಎ) ಮೂರು (ಬಿ) ನಾಲ್ಕು (ಸಿ) ಆರು (ಡಿ) ಎಂಟು

| **ಉತ್ತರ** | |
|---|---|

9. 'ಅವನು ಶಾಲೆಗೆ ಹೋಗುವನು' ವಾಕ್ಯವು ಈ ಕಾಲರೂಪದಲ್ಲಿದೆ:
   (ಎ) ಭೂತಕಾಲ (ಬಿ) ವರ್ತಮಾನಕಾಲ (ಸಿ) ಭವಿಷ್ಯತ್‌ಕಾಲ (ಡಿ) ಭೂತನ್ಯೂನಕಾಲ

| **ಉತ್ತರ** | |
|---|---|

10. ಇವುಗಳಲ್ಲಿ ಆಗಮ ಸಂಧಿಗೆ ಉದಾಹರಣೆಯಾದ ಪದವಿದು:
    (ಎ) ಅಕ್ಷಯಾಂಬರ (ಬಿ) ಮೊರೆಯಿಡು (ಸಿ) ಹಾಸ್ಯಾಸ್ಪದ (ಡಿ) ಫಳಿಗೆವಟ್ಟಲು

| **ಉತ್ತರ** | |
|---|---|